ರಾಜ್ಯದಲ್ಲಿರುವ ಟೆಕ್ಸ್‌ಟೈಲ್ ಕಾರ್ಖಾನೆಗಳು

೧೨೭೫(೨೪೫೩) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಭಾರೀ ಮತ್ತು ಮಾಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿರುವ ಬಟ್ಟೆ ಗಿರಣಿಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ನಡೆಯುತ್ತಿರುವ ಗಿರಣಿಗಳೆಷ್ಟು? ರೋಗಗ್ರಸ್ತರಾಗಿರುವ ಮತ್ತು ಮುಚ್ಚಿರುವಂತಹ ಗಿರಣಿಗಳ ಸಂಖ್ಯೆ ಎಷ್ಟೆಷ್ಟು? (ಪ್ರತ್ಯೇಕ ವಿವರ ನೀಡುವುದು)

ಇ) ಸ್ಥಗಿತಗೊಂಡಿರುವ ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ ಎಷ್ಟು?

ಈ) ಸದರಿ ನೌಕರರ ಜೀವನೋಪಾಯಕ್ಕೆ ಬದಲೀ ವ್ಯವಸ್ಥೆ ಮಾಡಲು ಸರ್ಕಾರವು ಕ್ರಮ ಕೈಗೊಂಡಿರುವುದೇ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಕರ್ನಾಟಕ ರಾಜ್ಯದಲ್ಲಿ ಬಟ್ಟೆ ಗಿರಣಿಗಳ ಸಂಖ್ಯೆ : ೪೧

ಆ) ನಡೆಯುತ್ತಿರುವ ಗಿರಣಿಗಳ ಸಂಖ್ಯೆ : ೩೧
ಮುಚ್ಚಿರುವ ಮಿಲ್‌ಗಳು : ೫
ರೋಗಗ್ರಸ್ಥ ಮಿಲ್‌ಗಳು : ೫

ಇ) ಮುಚ್ಚಿರುವ ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ : ೫೩೦೭

ಈ) ಇಲ್ಲ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಜೋಗವೃತ್ತ ಕಡೆಗಣಿಸುತ್ತಿರುವ ಬಗ್ಗೆ

೧೨೭೬(೨೬೮೧) ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಭಾರಿ ಮತ್ತು ಮಾಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಜೋಗ ಅಧಿಸೂಚಿತ ಪ್ರದೇಶ ಸಮಿತಿ ವ್ಯಾಪ್ತಿಯ ನಿವಾಸಿಗಳಿಗೆ ಗೃಹ ಬಳಕೆ ವಿದ್ಯುತ್ ಪೂರೈಕೆ ಮಾಡುವಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಜೋಗ ವೃತ್ತದವರು ಇಂಡಿಯನ್ ಎಲೆಕ್ಟ್ರಿಸಿಟಿ ಆಕ್ಟ್ ಮತ್ತು ರೂಲನ್ನು ಕಡೆಗಣಿಸಿ ಸಾರ್ವಜನಿಕರಿಗೆ ವಿದ್ಯುತ್ ಪೂರೈಕೆಯನ್ನು ಮಾಡದೆ ಇರುವುದು, ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಅನ್ಯಾಯವನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಾಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು). —

ಅ) ಭಾರತ ಸರ್ಕಾರವು ವೈಟಲ್ ಇನ್‌ಸ್ಟಲೇಷನ್‌ಗಳಿರುವ ಪ್ರದೇಶವನ್ನು ರಕ್ಷಣಾ ದೃಷ್ಟಿಯಿಂದ ನಿಷೇದಿತ ಪ್ರದೇಶವೆಂದು ಘೋಷಿಸಿದೆ. ಆದ್ದರಿಂದ ವಿದ್ಯುತ್ ದಂಡ ಸರಬರಾಜು ಬೇಡಿದ ೧೬೫ ಮಂದಿಗೆ ಆವರು ಆ ಪ್ರದೇಶದಲ್ಲಿ ಅನಧಿಕೃತ ನಿವಾಸಿಗಳಾಗಿದ್ದರೂ ಪ್ರತ್ಯೇಕ ಕರಾರು ಪತ್ರ ಪಡೆದು ಅವರುಗಳಿಗೆಲ್ಲಾ ವಿದ್ಯುತ್ ಸರಬರಾಜು ಮಾಡಲಾಗಿದೆ. ನಿಷೇದಿತ ಪ್ರದೇಶಗಳ ಹೊರಗಡೆ ವಾಸಿಸುವವರಿಗೆ ವಿದ್ಯುತ್ ಸರಬರಾಜು ಮಾಡುವಲ್ಲಿ ಯಾವ ಅಭ್ಯಂತರವೂ ಇಲ್ಲ.

ಆ) ನಿಷೇದಿತ ಪ್ರದೇಶದೊಳಗೆ ಅನಧಿಕೃತವಾಗಿ ವಾಸಿಸುವವರಿಗೆ ವಿದ್ಯುತ್ ಒದಗಿಸುವುದು ಸರಿಯಲ್ಲ. ಹೀಗೆ ಮಾಡಿದಲ್ಲಿ ಯಾವ ಉದ್ದೇಶಕ್ಕಾಗಿ ಆ ಪ್ರದೇಶವನ್ನು ನಿಷೇದಿತ ಪ್ರದೇಶವೆಂದು ಸಾರಲಾಗಿದೆಯೋ ಆ ಉದ್ದೇಶ ಸಾಧನೆಯಾಗದೆ ಹೋಗುತ್ತದೆ.